1084/ ಮುಇ WSLWO - 83    ದಿ: 23/03/26

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ನಾಗರಾಜು ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ**

**ಪ್ರಶ್ನೆ:-**

**ದಿನಾಂಕ: 19.03.2026 ರಂದು "ಶ್ರೀ ದತ್ತ ಕ್ಷೇತ್ರಕ್ಕೆ ದೊರಯದ ಕೇಂದ್ರದ 'ಪ್ರಸಾದ' - ಬಿಡುಗಡೆಯಾಗದ 83 ಕೋಟಿ ರೂ. - ಅನುದಾನವಿಲ್ಲದೆ ಮೂಲಸೌಕರ್ಯ ಮರೀಚಿಕೆ" ಎಂದು ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿರುತ್ತದೆ. " 'ಪ್ರಸಾದ' ಯೋಜನೆಯಲ್ಲಿ ಆಯ್ಕೆಯಾದ ದಕ್ಷಿಣ ಕಾಶಿಯಂದೇ ಕರೆಯಲ್ಪಡುವ ಕಲಬುರಗಿ ಜಿಲ್ಲೆಯ ಸುಕ್ಷೇತ್ರ ದೇವಲಗಾಣಗಾಪುರದ ಶ್ರೀ ದತ್ತಾತ್ರೇಯ ದೇವಸ್ಥಾನಕ್ಕೆ ಕೇಂದ್ರ ಸರ್ಕಾರ ಅನುದಾನ ನೀಡದೇ ಇರುವುದರಿಂದ ಕ್ಷೇತ್ರದ ಅಭಿವೃದ್ಧಿ ಮರೀಚಿಕೆಯಾಗಿದೆ. ಮುಜರಾಯಿ ಇಲಾಖೆಗೊಳಪಡುವ ಈ ದೇವಸ್ಥಾನದ ಸಮಗ್ರ ಅಭಿವೃದ್ಧಿಗೆ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯದ 'ಪ್ರಸಾದ' ಯೋಜನೆಯಡಿಯಲ್ಲಿ ಕಳೆದ ಫೆಬ್ರವರಿ-2023ರಲ್ಲಿ ಕೇಂದ್ರ ಬಜೆಟ್‌ನಲ್ಲಿ ಈ ದೇವಸ್ಥಾನ ಆಯ್ಕೆಯಾಗಿತ್ತು.**

**ಶ್ರೀ ದತ್ತಾತ್ರೇಯ ದೇವಸ್ಥಾನಕ್ಕೆ ಬರುವ ಭಕ್ತಾದಿಗಳು ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿರುವುದರಿಂದ ಈ ಹಿಂದೆ ಯೋಜಿಸಿದ್ದ 46 ಕೋಟಿ ರೂ.ಗಳ ಬದಲಾಗಿ, ಈಗ ದೇವಸ್ಥಾನದ ಆವರಣದ ಸಮಗ್ರ ಸುಧಾರಣೆ, ಯಾತ್ರಿ ನಿವಾಸ, ಕುಡಿಯುವ ನೀರು, ನೈರ್ಮಲ್ಯ ಮತ್ತು ಸಂಪರ್ಕ ರಸ್ತೆಗಳನ್ನೊಳಗೊಂಡಂತೆ ಒಟ್ಟು 83.52 ಕೋಟಿ ರೂ.ಗಳ ಪರಿಷ್ಕೃತ ಸಮಗ್ರ ಯೋಜನಾ ವರದಿಯನ್ನು (ಟಿಪಿಆರ್) ಸಿದ್ಧಪಡಿಸಿ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಕಳೆದ ಜುಲೈ-2024ರಂದು ಇಲಾಖೆಯ ರಾಜ್ಯ ನಿರ್ದೇಶಕರ ಕಛೇರಿ ಮೂಲಕ ಕೇಂದ್ರ ಪ್ರವಾಸೋದ್ಯಮ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ, ಒಂದೂವರೆ ವರ್ಷವಾದರೂ ಸಹ ಇದುವರೆಗೂ ಕೇಂದ್ರದಿಂದ ಅನುಮೋದನೆ ಮತ್ತು ಅನುದಾನ ಬಿಡುಗಡೆ ಆಗದೆ ಇರುವುದು ದುರಂತ" ಎಂದು ಸುದ್ದಿ ಪ್ರಕಟವಾಗಿರುತ್ತದೆ. ಪ್ರಯುಕ್ತ ರಾಜ್ಯ ಸರ್ಕಾರವು ಈ ಕೂಡಲೇ ಕೇಂದ್ರ ಪ್ರವಾಸೋದ್ಯಮ ಸಚಿವಾಲಯದ ಮೇಲೆ ಒತ್ತಡ ಹೇರಿ, ಕಲಬುರಗಿ ಜಿಲ್ಲೆಯ ಪ್ರವಾಸೋದ್ಯಮ ಮತ್ತು ಧಾರ್ಮಿಕ ಭಾವನೆಯ ದೃಷ್ಟಿಯಿಂದ ಅತ್ಯಂತ ಮಹತ್ವದ ಈ ₹83.52 ಕೋಟಿ ಅನುದಾನವನ್ನು ಶೀಘ್ರವಾಗಿ ಬಿಡುಗಡೆ ಮಾಡಿಸಲು ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಸಾರಿಗೆ ಮತ್ತು ಮುಜರಾಯಿ ಇಲಾಖೆ ಸಚಿವರನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುತ್ತಾರೆ.**

**ಉತ್ತರ:**

ಕಲಬುರಗಿ ಜಿಲ್ಲೆ ಅಫಜಲ್‌ಪುರ ತಾಲ್ಲೂಕು ದೇವಲ ಗಾಣಗಾಪುರದ ಶ್ರೀ ದತ್ತಾತ್ರೇಯ ಸ್ವಾಮಿ ದೇವಸ್ಥಾನವು ಧಾರ್ಮಿಕ ದತ್ತಿ ಇಲಾಖೆಯ ಆಡಳಿತಕ್ಕೆ ಒಳಪಟ್ಟ ಪ್ರವರ್ಗ- ಎ ಅಧಿಸೂಚಿತ ಸಂಸ್ಥೆಯಾಗಿರುತ್ತದೆ. ಈ ದೇವಾಲಯದ ವಾರ್ಷಿಕ ಆದಾಯವು ರೂ.4,12,77,000ಗಳಾಗಿರುತ್ತದೆ.

ದೇವಸ್ಥಾನಕ್ಕೆ ಸೇರಿದ 132x71 ಸೇರಿದ ಖಾಲಿ ಜಾಗದಲ್ಲಿ ದಾನಿಗಳು ಸ್ವಂತ ಹಣದಲ್ಲಿ ದಾಸೋಹ ಭವನವನ್ನು ನಿರ್ಮಿಸಲು ಮುಂದೆ ಬಂದಿರುತ್ತಾರೆ. ಅದರಂತೆ ದಾಸೋಹ ಭವನ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಅನುಮತಿ ನೀಡಲಾಗಿದ್ದು ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ದಿನಾಂಕ:13-02-2026 ರಂದು ಕಟ್ಟಡದ ಶಂಕುಸ್ಥಾಪನೆಯನ್ನು ನೆರವೇರಿಸಿರುತ್ತಾರೆ.

ಆದರೆ, ದೇವಾಲಯದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಅಗತ್ಯವಾದ ಜಾಗದ ಕೊರತೆಯಿರುತ್ತದೆ. ದೇವಾಲಯಕ್ಕೆ ಸಂಪರ್ಕವನ್ನು ಕಲ್ಪಿಸುವ ರಸ್ತೆಗಳು ಕಿರಿದಾಗಿದ್ದು, ರಸ್ತೆಗಳ ಅಗಲೀಕರಣ, ಯಾತ್ರಿ ನಿವಾಸ ನಿರ್ಮಾಣ, ಶೌಚಾಲಯಗಳ ನಿರ್ಮಾಣ ಇತರೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅಗತ್ಯವಾದ ಸುಮಾರು 13 ಎಕರೆ ಜಮೀನನ್ನು ಭೂ

ಸ್ವಾಧೀನಪಡಿಸಿಕೊಳ್ಳುವ ಅವಶ್ಯಕತೆಯಿದ್ದು, ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಸ್ಥಳ ಪರಿಶೀಲನೆ ನಡೆಸಿ ಅಂದು ಹಾಜರಿದ್ದ ಜಿಲ್ಲಾಧಿಕಾರಿಗಳಿಗೆ ದೇವಾಲಯಕ್ಕೆ ಅಗತ್ಯವಿರುವ ಭೂಮಿಯನ್ನು ಗುರುತಿಸಿ ಕಾಯ್ದಿರಿಸುವಂತೆ ಸೂಚನೆ ನೀಡಿರುತ್ತಾರೆ.

ಯಾತ್ರಿ ನಿವಾಸ ಹಾಗೂ ಧರ್ಮಶಾಲೆಗಳ ಪೈಕಿ ಶಿಥಿಲಾವಸ್ಥೆಯಲ್ಲಿರುವ ಧರ್ಮಶಾಲೆಗಳನ್ನು ಕೆಡವಿ ನೂತನ ಯಾತ್ರಿ ನಿವಾಸಗಳನ್ನು ನಿರ್ಮಿಸುವ ಕುರಿತು ಪರಿಶೀಲಿಸಲಾಗುತ್ತಿದೆ.

ಕೇಂದ್ರ ಸರ್ಕಾರದ **"ಪ್ರಸಾದ್"** ಯೋಜನೆಯಡಿಯಲ್ಲಿ ಶ್ರೀ ದತ್ತಾತ್ರೇಯ ದೇವಸ್ಥಾನದ ಅಭಿವೃದ್ಧಿಗಾಗಿ ಪ್ರವಾಸೋದ್ಯಮ ಇಲಾಖೆಯ ಮುಖಾಂತರ ರೂ.83.52 ಕೋಟಿಗಳ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ದಿನಾಂಕ: 29.10.2024 ರಂದು ಸಲ್ಲಿಸಲಾಗಿರುತ್ತದೆ. ಸದರಿ ಪ್ರಸ್ತಾವನೆಯಲ್ಲಿ ಪಾರ್ಕಿಂಗ್, ಸಿಸಿಟಿವಿ, Solar Panel , ಮಾಹಿತಿ ಕೇಂದ್ರ, ಪ್ರಸಾದ ಕೌಂಟರ್, Multi Purpose hall, ಪ್ರಥಮ ಚಿಕಿತ್ಸೆ, Clock room, ನಿರೀಕ್ಷಣಾ ಕೊಠಡಿ, ಘಾಟ್ ಅಭಿವೃದ್ಧಿ, ಶೌಚಾಲಯ, ಕುಡಿಯುವ ನೀರು, ಶೂ ಸ್ಟ್ಯಾಂಡ್, ಮಳೆ ನೀರು ಕೊಯ್ಲು, ಸಂಗಮ ಮತ್ತು ಅಷ್ಟ ತೀರ್ಥಗಳ ಅಭಿವೃದ್ಧಿ ಕಾಮಗಾರಿಗಳು ಒಳಗೊಂಡಿರುತ್ತದೆ.

ಕಂಇ 141 ಮುಸಪ್ರ 2026

(ರಾಮಲಿಂಗಾರೆಡ್ಡಿ)
**ಸಾರಿಗೆ ಮತ್ತು ಮುಜರಾಯಿ ಸಚಿವರು**